1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 43/2024</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಚಂದ್ರೇಗೌಡ | ಪಿಡಬ್ಲೂ -6 |
| ತಂದೆಯ ಹೆಸರು | - | ಮೊಗಣ್ಣಗೌಡ | ಸಿಡಬ್ಲೂ -11 |
| ವಯಸ್ಸು | - | 65 ವರ್ಷ | |
| ಉದ್ಯೋಗ | - | ನಿವೃತ್ತ ನೌಕರ | |
| ವಾಸ ಸ್ಥಳ | - | ಚಿಕ್ಕಮಗಳೂರು | |

ದಿನಾಂಕಃ 03.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಚಾಸಾ.1 ನನ್ನ ಅಳಿಯ. ಆತ ಈಗ ಬದುಕಿಲ್ಲ. ಪಂಚರಾದ ಫ್ರಾಸಾ.3 ಮತ್ತು ಫ್ರಾಸಾ.4 ರವರು ಗೊತ್ತು.
2. ಬೆಂಗಳೂರಿನ ಸ್ಪರ್ಷ ಆಸ್ಪತ್ರೆಯಲ್ಲಿ ಹಲ್ಲೆಗೊಳಗಾದ ಹಿನ್ನಲೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ.1 ರವರ ಬಟ್ಟೆಗಳನ್ನು ದಿನಾಂಕ 25.02.2023 ರಂದು ನಾನು ಸಖರಾಯಪಟ್ಟಣ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಪೊಲೀಸರಿಗೆ ಹಾಜರುಪಡಿಸಿದೆನು. ಆ ಬಗ್ಗೆ ಪೊಲೀಸರು ಮಹಜರ್ ಜರುಗಿಸಿ ಸದರಿ ಬಟ್ಟೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು, ಬಿಳಿಯ ಬಟ್ಟೆಯ ಚೀಲದಲ್ಲಿ ಪ್ಯಾಕ್ ಮಾಡಿಕೊಂಡರು.
3. ಸದರಿ ಮಹಜರ್ ಗೆ ನಾನು, ಫ್ರಾಸಾ.3 ಮತ್ತು ಫ್ರಾಸಾ.4 ರವರು ಸಹಿ ಮಾಡಿದೆವು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು

ಮಹಜರನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಸಿ) ಎಂದು ಗುರುತಿಸಲಾಯಿತು.

4. ಸದರಿ ಮಹಜರನ್ನು ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಪೊಲೀಸರು ಜರುಗಿಸಿದ್ದಾರೆ. ಸಾಕ್ಷಿಗೆ ಈಗಾಗಲೇ ನಿಪಿ.6 ಎಂದು ಗುರುತಿಸಲ್ಪಟ್ಟಿರುವ ಫೋಟೋವನ್ನು ತೋರಿಸಲಾಗಿ ಅದನ್ನು ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಪೊಲೀಸರು ತೆಗೆದುಕೊಂಡಿದ್ದಾಗಿ, ಅದರಲ್ಲಿ ತನ್ನ ಪಂಚರಾದ ಪ್ರಾಸಾ.3 ಮತ್ತು ಪ್ರಾಸಾ.4 ಮತ್ತು ಪೊಲೀಸರ ಇರುವಿಕೆ ಕಂಡು ಬರುವುದಾಗಿ ನುಡಿದಿರುತ್ತಾರೆ.

5. ಆ ದಿನ ನಾನು ಪೊಲೀಸರಿಗೆ ನೀಲಿ ಬಣ್ಣದ ತುಂಬು ತೋಳಿನ ರಕ್ತದ ಕಲೆಗಳಾಗಿದ್ದ ಒಂದು ಶರ್ಟು ಮತ್ತು ಒಂದು ಕಾಚಾವನ್ನು ಹಾಜರುಪಡಿಸಿದೆನು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

6. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಒಂದು ಗುಲಾಬಿ ಬಣ್ಣದ ಶರ್ಟನ್ನು ಮು.ಮಾ.1 ಎಂದು, ಒಂದು ನೀಲಿ ಬಣ್ಣದ ಕಾಚಾವನ್ನು ಮು.ಮಾ.2 ಎಂದು ಗುರುತಿಸಲಾಯಿತು. (ಈ ದಿನ ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಲ್ಪಟ್ಟ ವಸ್ತುಗಳನ್ನು ಪ್ಯಾಕ್ ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದು, ಅವುಗಳನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ, ಆತನ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ.)

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

7. ದಿನಾಂಕ 21.02.2023 ರಂದು ರಾತ್ರಿ 9.45 ಗಂಟೆಗೆ ನಾನು ಚಿಕ್ಕಮಗಳೂರಿನ ನನ್ನ ಮನೆಯಲ್ಲಿದ್ದಾಗ ನನ್ನ ಮಗಳು ನನಗೆ ಫೋನ್ ಮಾಡಿ ನನ್ನ ಅಳಿಯ ಅಂದರೆ ಆಕೆಯ ಗಂಡನಾದ ಚಾಸಾ.1 ರವರಿಗೆ ಗಲಾಟೆಯಾಗಿದ್ದು, ಅವರ ಮನೆಯ ಬೀದಿಯ ವಾಸಿಯಾದ ಆರೋಪಿ ಆತನ ತಲೆಗೆ ಹೊಡೆದು ಹೊಟ್ಟೆ ಮತ್ತು ಇತರೆ ಭಾಗಕ್ಕೆ ಚುಚ್ಚಿರುವುದಾಗಿ ಆತನನ್ನು ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುವುದಾಗಿ ತಿಳಿಸಿದರು ಎಂದರೆ ಸರಿ. ಆಗ ನಾನು ಕೂಡಲೇ ಸದರಿ ಆಸ್ಪತ್ರೆಯ ಬಳಿ ಹೋದಾಗ ಚಾಸಾ.1 ರವರನ್ನು ಅವರ ಸ್ನೇಹಿತರಾದ ಚಾಸಾ.8 ರವರು ಸದರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗಾಗಿ ದಾಖಲು ಮಾಡಿದ್ದರು ಎಂದರೆ ಸರಿ. ಆಗ ನಾನು ಚಾಸಾ.8 ರವರನ್ನು ವಿಚಾರಿಸಿದಾಗ ಆ ದಿನ ರಾತ್ರಿ 9.30 ಗಂಟೆ ಸಮಯಕ್ಕೆ ಅರಸು ಮಕ್ಕಳ ಬೀದಿಯಲ್ಲಿ ಆರೋಪಿ ಹಣದ ವಿಚಾರದಲ್ಲಿ ಚಾಸಾ.1 ರವರ ತಲೆಗೆ ಮಚ್ಚಿನಿಂದ ಮತ್ತು ಕತ್ತಿಯಿಂದ ಚುಚ್ಚಿ ರಕ್ತಗಾಯ ಮಾಡಿದ್ದಾಗಿ ತಿಳಿಸಿದರು ಎಂದರೆ ಸರಿ. ಚಾಸಾ.1 ರವರು ಧರಿಸಿದ್ದ ಬಟ್ಟೆಗಳಿಗೆ ರಕ್ತದ ಕಲೆಗಳಾಗಿದ್ದವು ಎಂದರೆ ಸರಿ. ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ.1 ರವರನ್ನು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸೂಚಿಸಿದ್ದರಿಂದ ನಾನು ಮತ್ತು

ನನ್ನ ಸಂಬಂಧಿ ಚಾಸಾ.12 ರವರು ಚಾಸಾ.1 ರವರನ್ನು ಬೆಂಗಳೂರಿನ ಸ್ಪರ್ಷ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ದಾಖಲು ಮಾಡಿದೆವು ಎಂದರೆ ಸರಿ. ಅಲ್ಲಿನ ವೈದ್ಯರು ಚಾಸಾ.1 ರವರಿಗೆ ಚಿಕಿತ್ಸೆ ಕೊಡುವ ಸಮಯದಲ್ಲಿ ಆತನ ಮೈಮೇಲಿದ್ದ ಬಟ್ಟೆಗಳನ್ನು ತೆಗೆದಿದ್ದು ಅದನ್ನು ನಾನು ತೆಗೆದುಕೊಂಡು ದಿನಾಂಕ 25.02.2023 ರಂದು ಪೊಲೀಸರಿಗೆ ಹಾಜರುಪಡಿಸಿದ್ದೇನೆ ಎಂದರೆ ಸರಿ. ಅದೇ ದಿನ ಮೇಲೆ ಹೇಳಿದ ಎಲ್ಲಾ ವಿಚಾರಗಳನ್ನು ತಿಳಿಸಿ ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿ.

<u>ಪಾಟೀ ಸವಾಲುಃ ಶ್ರೀ ಐ ಎಸ್ ಟಿ ವಕೀಲರಿಂದಃ ಆರೋಪಿ ಪರವಾಗಿ</u>

8. ನನ್ನ ಮಗಳು ನನಗೆ ಫೋನ್ ಮಾಡಿದಾಗ ಸಮಯ ರಾತ್ರಿ 9.30 ರಿಂದ 10.00 ರ ಒಳಗೆ ಆಗಿತ್ತು. ನೀವು ಆಸ್ಪತ್ರೆಗೆ ಹೋಗಿದ್ದಾಗಿ ಹೇಳಿದ್ದೀರಿ ಆಗ ವೈದ್ಯರು ಚಾಸಾ.1 ರವರಿಗೆ ಚಿಕಿತ್ಸೆ ಕೊಡುತ್ತಿದ್ದರೇ ಎಂದರೆ ಸಾಕ್ಷಿ ಪ್ರಥಮ ಚಿಕಿತ್ಸೆ ಕೊಟ್ಟಿದ್ದರು ಎನ್ನುತ್ತಾರೆ. ನೀವು ಎಷ್ಟು ಹೊತ್ತಿನವರೆಗೆ ಸದರಿ ಆಸ್ಪತ್ರೆಯಲ್ಲಿ ಇದ್ದಿರಿ ಎಂದರೆ ಸಾಕ್ಷಿ ರಾತ್ರಿ 10.30 ರಿಂದ 11.00 ಗಂಟೆಯವರೆಗೆ ಎನ್ನುತ್ತಾರೆ. ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ವೈದ್ಯರು ಚಾಸಾ.1 ರವರ ಬಟ್ಟೆಗಳನ್ನು ಬಿಚ್ಚಿರಲಿಲ್ಲ ಅವುಗಳ ಮೇಲೆಯೇ ಚಿಕಿತ್ಸೆ ನೀಡುತ್ತಿದ್ದರು. ನೀವು ನೋಡಿದಾಗ ಅವರ ಬಟ್ಟೆಗಳು ಹರಿದಿದ್ದವೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಯಾವ ರೀತಿ ಹರಿದಿತ್ತು ಎಂದರೆ ಸಾಕ್ಷಿ ಕಿತ್ತು ಹರಿದ ರೀತಿ ಇತ್ತು ಎನ್ನುತ್ತಾರೆ. ಚಾಸಾ.1 ರವರು ಆ ಸಮಯದಲ್ಲಿ ಪ್ಯಾಂಟನ್ನು ಧರಿಸಿದ್ದರೇ ಎಂದರೆ ಸಾಕ್ಷಿ ನಾನು ನೋಡಿದಾಗ ಇರಲಿಲ್ಲ ಎನ್ನುತ್ತಾರೆ.

9. ನಂತರದಲ್ಲಿ ಚಾಸಾ.1 ರವರ ಬಟ್ಟೆಯನ್ನು ಬದಲಿಸಲು

ಪ್ರಯತ್ನಿಸಿದಿರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅವರು ಧರಿಸಿದ್ದ ಶರ್ಟು ಮತ್ತು ಕಾಚಾದೊಂದಿಗೆ ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಚಾಸಾ.1 ರವರು ಧರಿಸಿದ್ದ ಪ್ಯಾಂಟ್ ಏನಾಯಿತು ಎಂದು ನನಗೆ ಇಲ್ಲಿಯವರೆಗೆ ಗೊತ್ತಿಲ್ಲ. ಚಾಸಾ.1 ರವರನ್ನು ನಾನು ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿರಲಿಲ್ಲ. ಅವರನ್ನು ನನ್ನ ಮಗಳು ಮತ್ತು ಚಾಸಾ.12 ರವರು ಅಲ್ಲಿಗೆ ಕರೆದುಕೊಂಡು ಹೋಗಿದ್ದರು.

10. ಅದಾದ ಅಂದರೆ ದಿನಾಂಕ 23.02.2023 ರಿಂದ 3 ದಿನಗಳ ಬಳಿಕ ಬೆಂಗಳೂರಿನ ಆಸ್ಪತ್ರೆಗೆ ಚಾಸಾ.1 ರವರನ್ನು ನೋಡಲು ಹೋಗಿದ್ದೆನು. ಬೆಂಗಳೂರಿನ ಆಸ್ಪತ್ರೆಗೆ ಪೊಲೀಸರು ಭೇಟಿ ನೀಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಸಖರಾಯಪಟ್ಟಣ ಪೊಲೀಸರ ಪರಿಚಯ ಇರಲಿಲ್ಲ. ಸದರಿ ಪೊಲೀಸರು ನನಗೆ ನೋಟೀಸನ್ನು ಕೊಟ್ಟಿರಲಿಲ್ಲ ಮತ್ತು ಫೋನ್ ಮಾಡಿ ಕರೆದಿರಲಿಲ್ಲ.

11. 22 ನೇ ತಾರೀಖಿನಂದು ಪೊಲೀಸರು ಚಾಸಾ.1 ರವರ ಬಟ್ಟೆ ಬೇಕು ಎಂದು ಹೇಳಿದ್ದರಿಂದ ನಾನು ದಿನಾಂಕ 23 ರಂದು ಬೆಂಗಳೂರಿನ ಆಸ್ಪತ್ರೆಗೆ ಹೋಗಿ ಬಟ್ಟೆಗಳನ್ನು ತಂದು ದಿನಾಂಕ 25 ರಂದು ಪೊಲೀಸರಿಗೆ ಕೊಟ್ಟೆನು.

12. ಮು.ಮಾ.1 ಶರ್ಟಿನಲ್ಲಿ ಕಾಣುತ್ತಿರುವ ರಂಧ್ರಗಳು ನೀವು ಅದನ್ನು ಪೊಲೀಸರಿಗೆ ಹಾಜರುಪಡಿಸಿದ ಕಾಲಕ್ಕೆ ಇದ್ದವೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಶರ್ಟಿನ ತೋಳುಗಳು ಮಡಚಿದ್ದು, ಅವುಗಳನ್ನು ನೀವು ಹಾಜರುಪಡಿಸಿದ ಕಾಲಕ್ಕೆ ಅದೇ ಸ್ಥಿತಿಯಲ್ಲಿದ್ದವೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮು.ಮಾ.1 ಹಳೆಯ ಶರ್ಟು ಎಂದರೆ ಸರಿ. ಮು.ಮಾ.1 ಯಾವ ಕಂಪೆನಿಗೆ ಸೇರಿದ್ದು ಎಂದರೆ ಸಾಕ್ಷಿ ನಾನು ಅದನ್ನು ಗಮನಿಸಿಲ್ಲ ಎನ್ನುತ್ತಾರೆ.

13. ನಾನು ಸಹಿ ಮಾಡಿದ ನಿಪಿ.5 ದಾಖಲೆಯಲ್ಲಿ ಮು.ಮಾ.1 ಮತ್ತು ಮು.ಮಾ.2 ಶರ್ಟು ಮತ್ತು ಕಾಚಾದ ಬಗ್ಗೆ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ, ನಾನು ಅದನ್ನು ಓದಿಲ್ಲ.

14. ಮಹಜರನ್ನು ಜರುಗಿಸಲಾಯಿತು ಎಂದು ಹೇಳಲಾದ ದಿನ ಪೊಲೀಸರು ನಿಮ್ಮ ಹೇಳಿಕೆಯನ್ನು ಪಡೆದುಕೊಂಡರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಂತರದಲ್ಲಿ ಪೊಲೀಸರು ನಿಮ್ಮ ಹೇಳಿಕೆಯನ್ನು ಪಡೆದುಕೊಂಡರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅದಾದ ಬಳಿಕ ನಾನು ಎಂದಿಗೂ ಸಹ ಪೊಲೀಸ್ ಠಾಣೆಗೆ ಹೋಗಲಿಲ್ಲ.

15. ಚಾಸಾ.8 ರವರು ಚಾಸಾ.1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲಿಸಿದ್ದಾಗಿ, ನೀವು ಅಲ್ಲಿಗೆ ಹೋಗಿ ಚಾಸಾ.8 ರವರನ್ನು ವಿಚಾರಿಸಿದಾಗ ಅವರು ಆ ದಿನ ರಾತ್ರಿ 9.30 ಗಂಟೆ ಸಮಯಕ್ಕೆ ಅರಸು ಮಕ್ಕಳ ಬೀದಿಯಲ್ಲಿ ಆರೋಪಿ ಹಣದ ವಿಚಾರದಲ್ಲಿ ಚಾಸಾ.1 ರವರ ತಲೆಗೆ ಮಚ್ಚಿನಿಂದ ಮತ್ತು ಕತ್ತಿಯಿಂದ ಚುಚ್ಚಿ ರಕ್ತಗಾಯ ಮಾಡಿದ್ದಾಗಿ ತಿಳಿಸಿದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

16. ಚಾಸಾ.1 ರವರಿಗೆ ಚಿನ್ನದ ಬಗ್ಗೆ ವ್ಯಾಮೋಹವಿದ್ದು ಅವರು ಚಿನ್ನದ ಒಡವೆಗಳನ್ನು ಧರಿಸುತ್ತಿದ್ದು ಅವರನ್ನು ಗೋಲ್ಡ್ ಗಣೇಶ ಎಂದು ಕರೆಯಲಾಗುತ್ತಿತ್ತು ಎಂದರೆ ಸಾಕ್ಷಿ ಆ ರೀತಿ ಏನು ಇಲ್ಲ ಎನ್ನುತ್ತಾರೆ. ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಚಾಸಾ.1 ರವರ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿವೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಚಾಸಾ.1 ರವರಿಗೆ ಹೆಚ್ಚು ಶತ್ರುಗಳು ಇದ್ದರು ಎಂದರೆ ಸಾಕ್ಷಿ ಶತ್ರುಗಳು ಇರಬಹುದು ಅದೇ ರೀತಿ ಮಿತ್ರರು ಇರಬಹುದು ಎನ್ನುತ್ತಾರೆ.

17. ಒಂದು ಗಲಾಟೆಯಲ್ಲಿ ಚಾಸಾ.1 ರವರ ಕೊಲೆಯಾಗಿದೆ ಎಂದರೆ ಸರಿ. ನೀವು ಹೇಳಿದಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ನಿಮ್ಮ ಮಗಳಿಗೋಸ್ಕರ ಮತ್ತು ನಿಮ್ಮ ಅಳಿಯನಾದ ಚಾಸಾ.1 ರವರಿಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ